ESTD - 1964

# ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು

(ಮೈಸೂರು ವಿಶ್ವವಿದ್ಯಾನಿಲಯದಿಂದ ಸ್ವಾಯತ್ತತೆ ಪಡೆದಿದೆ ★ ನ್ಯಾಕ್‌ನಿಂದ 'ಎ' ದರ್ಜೆ ಮಾನ್ಯತೆ ಪಡೆದಿದೆ)
'ಉತ್ಕೃಷ್ಟತಾ ಅಂತಃಸಾಮರ್ಥ್ಯ ಉಳ್ಳ' ಕಾಲೇಜು ಎಂದು ಯುಜಿಸಿಯಿಂದ ಗುರುತಿಸಲ್ಪಟ್ಟಿದೆ
ಭಾರತ ಸರ್ಕಾರದ ಡಿಬಿಟಿಯಿಂದ "ಸ್ಟಾರ್ ಕಾಲೇಜ್ ಸ್ಕೀಮ್" ಅಡಿಯಲ್ಲಿ ಗುರುತಿಸಲ್ಪಟ್ಟಿದೆ
ಊಟಿರಸ್ತೆ, ಮೈಸೂರು-570 025, ಕರ್ನಾಟಕ

☎ 0821-2548236 & 2548380 Fax: 0821-2548238 E-mail: jssautonomous@gmail.com


## ಪತ್ರಿಕಾ ವರದಿ

ದಿನಾಂಕ 16 ಮಾರ್ಚ್ 2015 ರಂದು ಜಗದ್ಗುರು ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳ ಜನ್ಮ ಶತಮಾನೋತ್ಸವದ ಅಂಗವಾಗಿ ಒಂದು ದಿನದ ಪಿಪಿವಿ ಮತ್ತು ಎಫ್‌ಆರ್‌ಎ(GOI) ಪ್ರಾಯೋಜಿತ " ಸಸ್ಯ ತಳಿಗಳ ಸಂರಕ್ಷಣೆ ಮತ್ತು ರೈತರ ಹಕ್ಕುಗಳ ರಕ್ಷಣಾ ಕಾಯ್ದೆ" ವಿಷಯದ ಕುರಿತು ತರಬೇತಿ ಮತ್ತು ಜಾಗೃತಿ ಕಾರ್ಯಕ್ರಮವನ್ನು ಊಟಿ ರಸ್ತೆಯಲ್ಲಿರುವ ಜೆಎಸ್‌ಎಸ್ ಕಾಲೇಜಿನ ಸ್ನಾತಕೋತ್ತರ ಜೈವಿಕ ತಂತ್ರಜ್ಞಾನ ವಿಭಾಗದ ವತಿಯಿಂದ ಹಮ್ಮಿಕೊಳ್ಳಲಾಗಿತ್ತು.

ಡಾ॥ ಸಿ ಎಲ್ ಲಕ್ಷ್ಮಿಪತಿಗೌಡ, ನಿವೃತ್ತ ಉಪನಿರ್ದೇಶಕರು, ಸಂಶೋಧನಾ ವಿಭಾಗ, ಅಂತರಾಷ್ಟ್ರೀಯ ಕೃಷಿ ಸಂಶೋಧನಾ ಸಂಸ್ಥೆ (ICRISAT), ಹೈದ್ರಾಬಾದ್ ಇವರು – ಕಾರ್ಯಕ್ರಮವನ್ನು ಉದ್ಘಾಟಿಸಿ ಸಾಂಪ್ರದಾಯಿಕವಾಗಿರುವ ಜೈವಿಕ ವೈವಿಧ್ಯತೆ ಮತ್ತು ಬೇಸಾಯಗಾರರ ಹಕ್ಕುಗಳ ಕುರಿತು ಮಾತನಾಡಿದರು, ಮುಖ್ಯವಾಗಿ ವಿವಿಧ ಸಸ್ಯ ತಳಿಗಳ ಸಂರಕ್ಷಣೆ ಮತ್ತು ರೈತರ ಹಕ್ಕು ಕಾಯ್ದೆಗಳ ಬಗ್ಗೆ ತಿಳಿಸಿದರು. ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯದರ್ಶಿ–1, ಪ್ರೊ ಎಸ್ ಪಿ ಮಂಜನಾಥ್ ಅವರು ಅಧ್ಯಕ್ಷತೆ ವಹಿಸಿ ಈ ತರಬೇತಿ ಮತ್ತು ಜಾಗೃತಿ, ನೈಜ್ಯ ರೈತ ಸಮುದಾಯಕ್ಕೆ ತಲುಪಿಸಬೇಕು ಹಾಗೂ ವಿದ್ಯಾರ್ಥಿಗಳು ಕೂಡ ಕೃಷಿಯನ್ನು ಗೌರವಯುತ ಕಾಯಕವೆಂದು ಪರಿಗಣಿಸಬೇಕೆಂದು ತಿಳಿಸಿದರು.

ಕಾಲೇಜಿನ ಪ್ರಾಂಶುಪಾಲರಾದ ಪ್ರೊ ಎಂ ಬಿ ಮಲ್ಲಿಕಾರ್ಜುನ ಪಂಡಿತ್ ಅವರು ಸ್ವಾಗತಿಸಿದರು. ಸ್ನಾತಕೋತ್ತರ ಜೈವಿಕ ತಂತ್ರಜ್ಞಾನ ವಿಭಾಗದ ಮುಖ್ಯಸ್ಥರಾದ ಡಾ॥ ಬಿ ವೈ ಸತೀಶ್‌ಕುಮಾರ್ ಅವರು ಪ್ರಾಸ್ತಾವಿಕ ಮಾತುಗಳನ್ನಾಡಿದರು. ಕಾಲೇಜಿನ ಅಕಾಡೆಮಿಕ್ ಡೀನ್ ಆದ ಪ್ರೊ ಎಂ ಮಹದೇವಪ್ಪ ನವರು ವಂದಿಸಿದರು. ಕುಮಾರಿ ಪೂಜಿತ ಅವರು ಪ್ರಾರ್ಥಿಸಿದರು. ಡಾ॥ ಬಿ ವಿ ಲತಾ ನಿರೂಪಿಸಿದರು.

ನಂತರದ ಗೋಷ್ಠಿಗಳಲ್ಲಿ ಬೆಂಗಳೂರಿನ ಕೃಷಿ ವಿಜ್ಞಾನ ವಿಶ್ವವಿದ್ಯಾಲಯದ ಪ್ರಾಧ್ಯಾಪಕರಾದ ಡಾ॥ ನಿರಂಜನಮೂರ್ತಿ, ಮಂಡ್ಯ ವಿ ಸಿ ಫಾರಂನ ಸಹ ಪ್ರಾಧ್ಯಾಪಕರಾದ ಡಾ॥ ಎಚ್ ಸಿ ಲೋಹಿತಾಶ್ವ, ಸುತ್ತೂರಿನ ಜೆಎಸ್‌ಎಸ್ ಕೃಷಿ ವಿಜ್ಞಾನ ಕೇಂದ್ರದ ಕಾರ್ಯಕ್ರಮ ಸಂಯೋಜನಾಧಿಕಾರಿಗಳಾದ ಡಾ॥ ಅರುಣ್ ಬಲಮಟ್ಟಿ ಅವರು ಸಸ್ಯ ತಳಿಗಳ ಸಂರಕ್ಷಣೆ ಮತ್ತು ರೈತರ ಹಕ್ಕು ಕಾಯ್ದೆ ವಿಚಾರವಾಗಿ ಹಲವು ದೃಷ್ಟಿಕೋನಗಳಿಂದ ಮೌಲಿಕವಾದ ವಿಚಾರಗಳನ್ನು ಮಂಡಿಸಿದರು. ಸುಮಾರು ನೂರು ವಿದ್ಯಾರ್ಥಿಗಳು ಮತ್ತು ರೈತರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಸಂಪಾದಕರು

---------

---------

M.B. Mallikarjuna pandit

(ಪ್ರೊ ಎಂ ಬಿ ಮಲ್ಲಿಕಾರ್ಜುನ ಪಂಡಿತ್)

ಪ್ರಾಂಶುಪಾಲರು
ಜೆ.ಎಸ್.ಎಸ್. ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು
(ಸ್ವಾಯತ್ತ)
ಊಟಿ ರಸ್ತೆ, ಮೈಸೂರು-570025